ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : 27/1/21

ಕನ್ನಡಪ್ರಭ
ಸಂಪಾದಕೀಯ 27/1/21

# ಹಿಂಸಾರೂಪದ ಹೋರಾಟದಿಂದ ಸಮಸ್ಯೆಗೆ ಪರಿಹಾರ ಸಿಗದು

ಕೇಂದ್ರ ಸರ್ಕಾರದ 3 ಕೃಷಿ ಕಾಯ್ದೆಗಳನ್ನು ವಿರೋಧಿಸಿ ಕಳೆದ 60 ದಿನಗಳಿಂದ ಪಂಜಾಬ್, ಹರ್ಯಾಣ ಹಾಗೂ ಉತ್ತರಪ್ರದೇಶ ರೈತರು ದೆಹಲಿ ಹೊರವಲಯದ ಗಡಿಗಳಲ್ಲಿ ನಡೆಸುತ್ತಿರುವ ಶಾಂತಿಯುತ ಪ್ರತಿಭಟನೆ ಮಂಗಳವಾರ ಹಿಂಸಾರೂಪ ಪಡೆದಿರುವುದು ನಿಜಕ್ಕೂ ಕಳವಳಕಾರಿ ಬೆಳವಣಿಗೆ. ಟ್ರ್ಯಾಕ್ಟರ್ ಪರೇಡ್ ಹೆಸರಿನಲ್ಲಿ ದೆಹಲಿ ಪ್ರವೇಶಿಸಿದ ರೈತರು, ಪೊಲೀಸರ ಜತೆ ಕಾದಾಡಿ ದೆಹಲಿಯ ಪ್ರಮುಖ ಬಡಾವಣೆಗಳಲ್ಲಿ ದಾಂಧಲೆ ನಡೆಸಿ ಐತಿಹಾಸಿಕ ಕೆಂಪುಕೋಟೆಗೆ ಲಗ್ಗೆ ಇಟ್ಟು, ಪ್ರಧಾನಮಂತ್ರಿಗಳು ಆ.15ರಂದು ಧ್ವಜಾರೋಹಣ ಮಾಡುವ ಸ್ಥಳದಲ್ಲಿ ಪರ್ಯಾಯ ಧ್ವಜ ಹಾರಿಸಿರುವುದನ್ನು ಕಂಡು ದೇಶ ಹೌಹಾರಿದೆ. ರೈತರು ಕೆಂಪುಕೋಟೆಯಲ್ಲಿ ನಡೆದುಕೊಂಡ ರೀತಿ ಐತಿಹಾಸಿಕವಾಗಿ ಒಂದು ಕಪ್ಪುಚುಕ್ಕೆ.

ಕೃಷಿ ಕ್ಷೇತ್ರದಲ್ಲಿ ಕ್ರಾಂತಿಕಾರಕ ಸುಧಾರಣೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರ 3 ಕೃಷಿ ಮಸೂದೆಗಳನ್ನು ಸುಗ್ರೀವಾಜ್ಞೆ ರೂಪದಲ್ಲಿ ಜಾರಿಗೆ ತಂದಿದೆ. ಕನಿಷ್ಠ ಬೆಂಬಲ ಬೆಲೆಯ ಗರಿಷ್ಠ ಲಾಭ ಪಡೆಯುತ್ತಿರುವ ಪಂಜಾಬ್, ಹರ್ಯಾಣ ರೈತರು ಈ ಕಾಯ್ದೆಗಳನ್ನು ವಿರೋಧಿಸಿ ನ.26ರಿಂದ ದೆಹಲಿಯಲ್ಲಿ ಹೆಂಗಸರು, ಮಕ್ಕಳು, ವೃದ್ಧರೊಂದಿಗೆ ರಸ್ತೆಯಲ್ಲೇ ಧರಣಿ ನಡೆಸುತ್ತಿದ್ದಾರೆ. ಪಶ್ಚಿಮ ಉತ್ತರಪ್ರದೇಶದ ರೈತರೂ ಈ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. 6 ತಿಂಗಳಿಗಾಗುವಷ್ಟು ಪಡಿತರ ಸಾಮಗ್ರಿ ಜತೆ ದೆಹಲಿಗೆ ಲಗ್ಗೆ ಇಟ್ಟಿರುವ ರೈತರು ವಿಭಿನ್ನ ಹಾಗೂ ಶಾಂತಿಯುತ ಪ್ರತಿಭಟನೆಗಳ ಮೂಲಕ ಗಮನಸೆಳೆದಿದ್ದರು. ರೈತರ ಮನವೊಲಿಸಲು ಸರ್ಕಾರ ಈಗಾಗಲೇ 11 ಸುತ್ತಿನ ಮಾತುಕತೆ ನಡೆಸಿದೆ. ಕೃಷಿ ಕಾಯ್ದೆಗೆ ತಿದ್ದುಪಡಿ, ಒಂದೂವರೆ ವರ್ಷ ಕಾಯ್ದೆ ಅನುಷ್ಠಾನಕ್ಕೆ ತಡೆ, ರೈತರ ಕಳವಳ ಹೋಗಲಾಡಿಸಲು ಸಮಿತಿ ರಚನೆಯಂತಹ ಭರವಸೆಗಳನ್ನು ಮಾತುಕತೆಗಳ ವೇಳೆ ಸರ್ಕಾರ ರೈತರ ಮುಂದೆ ಇಟ್ಟಿದೆ. ಆದರೆ ಕೃಷಿ ಕಾಯ್ದೆ ವಾಪಸ್ ಬಿಟ್ಟು ಬೇರಾವ ಪ್ರಸ್ತಾವಕ್ಕೂ ರೈತರು ಒಪ್ಪುತ್ತಿಲ್ಲ. ಇದೇ ಈಗ ಕಗ್ಗಂಟಿನ ಮೂಲ.

**ಪ್ರತಿಭಟನೆ ನಡೆಸಲು ಎಲ್ಲರಿಗೂ ಹಕ್ಕು ಇದೆ. ಆದರೆ ಒಂದು ನಗರಕ್ಕೆ ನುಗ್ಗಿ, ದಾಂಧಲೆ ಎಬ್ಬಿಸುವುದಕ್ಕೆ ಯಾರಿಗೂ ಅವಕಾಶವಿಲ್ಲ.**

ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ನಿರ್ಧರಿಸಿದ್ದ ರೈತರು ದೇಶದ ಗಮನಸೆಳೆಯಲು ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ಟ್ರ್ಯಾಕ್ಟರ್ ಪರೇಡ್ ನಡೆಸುವುದಾಗಿ ಘೋಷಿಸಿದ್ದರು. ತಮ್ಮದು ಶಾಂತಿಯುತ ಹೋರಾಟ ಎಂದೇ ಹೇಳಿಕೊಂಡಿದ್ದರು. ಗಣರಾಜ್ಯೋತ್ಸವ ಸಂದರ್ಭದಲ್ಲಿ ರಾಜಪಥದಲ್ಲಿ ವೈಭವದ ಪರೇಡ್ ನಡೆಯುತ್ತದೆ. ಅಲ್ಲಿ ಅತ್ಯಂತ ಬಿಗಿಭದ್ರತೆಗಾಗಿ ಸಹಸ್ರಾರು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿರಲಾಗುತ್ತದೆ. ಹೀಗಾಗಿ ಪ್ರತಿಭಟನೆಗೆ ಅವಕಾಶ ಬೇಡ ಎಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ವಾದಿಸಿತ್ತು. ಆದರೆ ಅನುಮತಿ ನೀಡುವ ಹೊಣೆಯನ್ನು ಸುಪ್ರೀಂಕೋರ್ಟ್ ಪೊಲೀಸರಿಗೆ ವಹಿಸಿತ್ತು. ಪೊಲೀಸರು ರೈತರ ಜತೆ ಮಾತನಾಡಿ ಟ್ರ್ಯಾಕ್ಟರ್ ಪರೇಡ್‌ಗೆ 100 ಕಿ.ಮೀ. ಉದ್ದದ ಮಾರ್ಗವನ್ನು ಸೂಚಿಸಿದ್ದರು. ಪ್ರತಿಭಟನೆ ಮುಗಿದ ಬಳಿಕ ದೆಹಲಿ ಹೊರವಲಯಕ್ಕೆ ಮರಳಬೇಕು ಎಂದು ರೈತರ ಮನವೊಲಿಸಿದ್ದರು. ಆದರೆ ಮಂಗಳವಾರ ಆದದ್ದೇ ಬೇರೆ. ನಿಗದಿತ ಸಮಯಕ್ಕಿಂತ ಮೊದಲೇ ದೆಹಲಿಗೆ ಲಗ್ಗೆ ಇಡಲು ರೈತರು ಮುಂದಾದರು. ಪೊಲೀಸರು ಅಡ್ಡಿಪಡಿಸಿದರು. ಉದ್ದೇಶಿತ ಮಾರ್ಗ ಬಿಟ್ಟು ರೈತರು ಕಂಡಕಂಡ ಕಡೆಗೆ ನುಗ್ಗಿ, ಕೆಂಪುಕೋಟೆಗೆ ಲಗ್ಗೆ ಇಟ್ಟರು. ಅಶ್ರುವಾಯು, ಲಾಠಿ ಪ್ರಹಾರ ಯಾವುದೂ ಪ್ರಯೋಜನಕ್ಕೆ ಬರಲಿಲ್ಲ.

ರೈತರ ಶಾಂತಿಯುತ ಪ್ರತಿಭಟನೆ ಏಕಾಏಕಿ ಹಿಂಸಾಚಾರದತ್ತ ಹೊರಳಿದ್ದಕ್ಕೆ ಇದೀಗ ಅನುಮಾನಗಳು ಕೇಳಿಬರುತ್ತಿವೆ. ರೈತರ ಪ್ರತಿಭಟನೆಯನ್ನು ಸಮಾಜವಿದ್ರೋಹಿ ಶಕ್ತಿಗಳು ದೊಂಬಿ ಸೃಷ್ಟಿಸಲು ಬಳಸಿಕೊಂಡಿವೆಯೇ ಎಂಬ ಆತಂಕ ವ್ಯಕ್ತವಾಗುತ್ತಿದೆ. ಇದಕ್ಕೆ ಇಂಬುನೀಡುವಂತೆ ಹಿಂಸೆ ನಡೆಸಿದವರು ನಮ್ಮವರಲ್ಲ ಎಂದು ರೈತ ಸಂಘಟನೆಗಳೇ ಹೇಳಿಕೊಳ್ಳುತ್ತಿವೆ. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ನಡೆಸಲು ಎಲ್ಲರಿಗೂ ಹಕ್ಕು ಇದೆ. ಆದರೆ ಒಂದು ನಗರಕ್ಕೆ ನುಗ್ಗಿ, ದಾಂಧಲೆ ಎಬ್ಬಿಸುವುದಕ್ಕೆ ಯಾರಿಗೂ ಅವಕಾಶವಿಲ್ಲ. ಸರ್ಕಾರದ ಜತೆ ರೈತರು ಶಾಂತಿಯುತ ಮಾರ್ಗದಲ್ಲಿ ತಮ್ಮ ಕಳವಳಗಳಿಗೆ ಪರಿಹಾರ ಕಂಡುಕೊಳ್ಳಬೇಕೆ ಹೊರತು ಈ ರೀತಿ ಹಿಂಸಾಮಾರ್ಗ ಅನುಸರಿಸಿದರೆ ಯಾವುದೇ ಪರಿಹಾರ ದೊರೆಯುವುದಿಲ್ಲ. ದೊರಕಲೂಬಾರದು. ಹಿಂಸೆಗೆ ಸರ್ಕಾರ ಮಣಿದರೆ ಮುಂದೆ ಹಿಂಸೆಯೇ ಎಲ್ಲ ಸಮಸ್ಯೆಗಳಿಗೂ ಪರಿಹಾರ ಎಂಬಂತಾಗಿಬಿಡುತ್ತದೆ. ಸರ್ಕಾರ ಅದಕ್ಕೆ ಅವಕಾಶ ಕೊಡಬಾರದು. ಮಂಗಳವಾರದ ಹಿಂಸೆಗೆ ಕಾರಣರಾದವರನ್ನು ಹುಡುಕಿ ಶಿಕ್ಷಿಸುವ ಕೆಲಸವನ್ನು ಮಾಡಬೇಕು.